**ದಿನಾಂಕಃ 24/01/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ. ಆರ್.ಎಸ್. ವಕೀಲರಿಂದಃ**

1. ನಾನು ಲಕ್ಷ್ಮೀಪುರ ದಲ್ಲಿ ವಾಸವಾಗಿದ್ದೇನೆ. ನಮ್ಮ ಮನೆಗೂ ಹಾಗೂ ವಾದಿಗಳ ಮನೆಗೂ ಸುಮಾರು ಅರ್ಧ ಕಿ.ಮೀ.ಅಂತರ ಇದೆ. ದಾವಾ ಸ್ವತ್ತುಗಳು ವಾದಿಗಳಿಗೆ ಸಾಗುವಳಿ ಮೂಲಕ ಬಂದಿರುತ್ತವೆ. ಅದು ಯಾವ ಇಸವಿ ಮತ್ತು ಯಾವ ತಿಂಗಳು ಎಂದು ನನಗೆ ಗೊತ್ತಿಲ್ಲ. ಸ.ನಂ. 30/ಪಿ91 ರಲ್ಲಿ1 ಎಕರೆ 35 ಗುಂಟೆ ಜಮೀನು ವಾದಿಗಳಿಗೆ ಸಾಗುವಳಿ ಮೂಖಾಂತರ ಬಂದಿರುತ್ತದೆ. ಸ.ನಂ. 30 ರಲ್ಲಿ ಯಾರು ಯಾರಿಗೆ ಎಷ್ಟು ವಿಸ್ತೀರ್ಣ ಜಮೀನು ಸಾಗುವಳಿ ಯಾಗಿರುತ್ತದೆ ಎಂದರೆ ಸಾಕ್ಷಿಯು ನನ್ನದೇ ಜಮೀನು ನನಗೆ ಗೊತ್ತಿಲ್ಲ ಬೇರೆಯವರ ಜಮೀನಿನ ಬಗ್ಗೆ ನಾನು ಹೇಗೆ ತಿಳಿಸಲಿ ಎಂದು ನುಡಿಯುತ್ತಾರೆ.

2. ನನ್ನನ್ನು ವಾದಿ ರಾಮನಾಯಕ ರವರು ಸಾಕ್ಷಿಯನ್ನು ನುಡಿಯಲು ನ್ಯಾಯಾಲಯಕ್ಕೆ ಕರೆದರು. ನಾನು ಸಲ್ಲಿಸಿದ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಸ.ನಂ. 30 ಯಾವ ಇಸವಿಯಲ್ಲಿ ಯಾರು ಯಾರಿಗೆ ಪೋಡಾಯಿತು ಎಂದು ನನಗೆ ಗೊತ್ತಿಲ್ಲ. ವಾದಿ ಮತ್ತು ಪ್ರತಿವಾದಿಗಳು ವಿಭಾಗ ಮಾಡಿಕೊಂಡು ಸುಮಾರು 12 ವರ್ಷಗಳು ಕಳೆದಿವೆ. ನಾನು ವಿಭಾಗದ ದಾಖಲಾತಿಗಳನ್ನು ನೋಡಿಲ್ಲ. ಯಾರು ಯಾರಿಗೆ ಯಾವ ಯಾವ ಸ.ನಂ. ನಲ್ಲಿ ಎಷ್ಟು ಎಷ್ಟು ವಿಸ್ತೀರ್ಣ ಜಮೀನು ಹೋಯಿತು ಎಂದು ನನಗೆ ಗೊತ್ತಿಲ್ಲ.

3. ನಾನು ದಾವಾ ಸ್ವತ್ತಿನ ಉತ್ತರ ದಿಕ್ಕಿನ ಜಮೀನಿನ ಮಾಲೀಕ. ದಾವಾ ಐಟಂ ನಂ.2 ರ ಪಶ್ಚಿಮಕ್ಕೆ ಬೈರೇಗೌಡ ರವರ ಮನೆ, ಉತ್ತರಕ್ಕೆ ಸರ್ಕಾರಿ ರಸ್ತೆ, ದಕ್ಷಿಣಕ್ಕೆ ಕುಳ್ಳೇಗೌಡ ರವರ ಹಿತ್ತಲು ಮತ್ತು ಪೂರ್ವಕ್ಕೆ ಗುಂಡೇಗೌಡ ರವರ ಮನೆ ಇದೆ. ಐಟಂ ನಂ.2 ರ ಮನೆಯ ಜಂಜರ್ ನಂ. ಮತ್ತು ಸ್ವತ್ತಿನ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಮನೆಯ ಪೂರ್ವ–ಪಶ್ಚಿಮ ಮತ್ತು ಉತ್ತರ–ದಕ್ಷಿಣದ ಅಳತೆ ನನಗೆ ಗೊತ್ತಿಲ್ಲ.

4. ನಾನು ವಾದಿಯವರ ಮಾತನ್ನು ಕೇಳಿಕೊಂಡು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ವಾದಿಯ ವಿರುದ್ಧ ತೊಂದರೆಯನ್ನು ನೀಡಬಾರದು ಎಂದು ಅಸಲು ದಾವೆ ಸಂ. 30/2015 ರಲ್ಲಿ ದಾವೆಯನ್ನು ಹೂಡಿದ್ದರು ಎಂದರೆ ನನಗೆ ಗೊತ್ತಿಲ್ಲ, ಸದರಿ ದಾವೆಯು ಪ್ರತಿವಾದಿಗಳ ಪರ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ. ವಾದಿಗಳು ತಮಗೂ ಜಮೀನು ಬರಬೇಕೆಂದು ಈ ದಾವೆಯನ್ನು ಹೂಡಿದ್ದಾರೆ. ನಾನು ಸುಳ್ಳು ಪ್ರಮಣ ಪತ್ರವನ್ನು ಸಲ್ಲಿಸಿ, ಸುಳ್ಳು ಸಾಕ್ಷಿಯನ್ನು ನುಡಿಯುುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು**

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**